

# ಕ್ಯಾನ್ಸರ್ ನಡುವೆಯೂ ಮಹೇಶ್ ಚಿತ್ರಪ್ರೀತಿ

■ ವಿಶಾಖ ಎನ್.

ಸಲ್ಮಾನ್ ಖಾನ್ ಕಣ್ಣಲ್ಲಿ ಅ. 25ರಂದು ಪಸೆ ಆಡಿದ್ದಕ್ಕೆ ಕಾರಣವಿತ್ತು. ಅವರ ಎದುರಲ್ಲಿ ಇದ್ದ ನಿರ್ದೇಶಕ ಮಹೇಶ್ ಮಂಜ್ರೇಕರ್ ರೆಪ್ಪೆಗಳು ಬಡಿದಾಗ ಅವುಗಳಿಂದ ಜಿನುಗಿದ ಹನಿಗಳೂ ಕಥೆಯನ್ನರುಹಿದವು. 'ಅಂತಿಮ್: ದಿ ಫೈನಲ್ ಟ್ರೂತ್' ಹಿಂದಿ ಸಿನಿಮಾ ನ. 26ರಂದು ತೆರೆಕಾಣಲಿದೆ. ಸಲ್ಮಾನ್ ಖಾನ್ ಹಣವನ್ನೂ ಹೂಡಿರುವ ಚಿತ್ರ ಇದು. ನಿರ್ದೇಶಕ ಮಹೇಶ್ ಮಂಜ್ರೇಕರ್ ಸಾಹಸ ಪ್ರಧಾನ ದೃಶ್ಯಗಳಿಗೆ ಜೀವತುಂಬುವುದರಲ್ಲಿ ನಿಸ್ಸೀಮರೆನ್ನುವುದು ಸಲ್ಮಾನ್‌ಗೆ ಗೊತ್ತಿದ್ದರಿಂದಲೇ ಈ ಸಿನಿಮಾ ಸಾಕಾರಗೊಂಡದ್ದು.

ಸಲ್ಮಾನ್ ಹಾಗೂ ಮಹೇಶ್ ಕಣ್ಣುಗಳಲ್ಲಿ ನೀರಾಡಿದ್ದು ಈ ಕಾರಣಕ್ಕೆ ಅಲ್ಲ. ಸಿನಿಮಾ ಚಿತ್ರೀಕರಣದ ನಡುಘಟ್ಟದಲ್ಲಿ ಮಹೇಶ್ ಮಂಜ್ರೇಕರ್ ಅವರಿಗೆ ಕ್ಯಾನ್ಸರ್ ಇದೆ ಎನ್ನುವುದು ಗೊತ್ತಾದದ್ದು ಅದಕ್ಕೆ ಕಾರಣ. ಮಹೇಶ್ ಮೊದಲಿಗೆ ಸಲ್ಮಾನ್ ಹಾಗೂ ಚಿತ್ರತಂಡದವರಿಗೆ ತಮ್ಮ ಆರೋಗ್ಯದ ಸಮಸ್ಯೆಯನ್ನು ತಿಳಿಸಲಿಲ್ಲ. ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತಲೇ ಇದ್ದರು. ಅದೊಂದು ದಿನ ಕಿಮೊ ಥೆರಪಿಗೆ ಹೋಗಬೇಕು ಎಂದಾಗ ತಂಡದಲ್ಲಿದ್ದ ಅನೇಕರಿಗೆ ಆಶ್ಚರ್ಯ. ಮಧುಮೇಹದ ಪರೀಕ್ಷೆ ಮಾಡಿಸಿಕೊಳ್ಳಲು ಹೇಳುವಷ್ಟೇ ಸಹಜವಾಗಿ ಮಹೇಶ್ ಈ ವಿಷಯವನ್ನು ಹಂಚಿಕೊಂಡಿದ್ದರು.

ಕಿಮೊ ಥೆರಪಿಗಳಾದ ಮೇಲೂ ಮಹೇಶ್ ನಿಸ್ತೇಜರಾಗಲಿಲ್ಲ. ಮೈಕೈ ನೋವು ಕೂಡ ಅಸಹನೀಯ ಎಂದೇನೂ ಅನಿಸಲಿಲ್ಲ. ಆಗಲೂ ಅವರು ಚಿತ್ರೀಕರಣದ ಕೆಲಸಗಳಿಗೆ ತೊಡಕಾಗದಂತೆ ನೋಡಿಕೊಂಡರು. ಅಂತಿಮ ಹಂತದ ಕೆಲಸಗಳು ಬಾಕಿ ಇರುವಾಗಲೇ ಶಸ್ತ್ರಚಿಕಿತ್ಸೆಗೂ ಒಳಗಾದರು.

ಈ ಪ್ರಕರಣವನ್ನು ಸಲ್ಮಾನ್ ಅ. 25ರಂದು ಸಿನಿಮಾದ ಟ್ರೇಲರ್ ಬಿಡುಗಡೆಯಾದ ಸಮಾರಂಭದಲ್ಲಿ ಮೆಲುಕು ಹಾಕಿದರು. ಬದ್ಧ ನಿರ್ದೇಶಕನೊಬ್ಬ ಹೀಗೆ ಚಿತ್ರಕರ್ಮದಲ್ಲೇ ತೊಡಗಿ ತನ್ನ ಅನಾರೋಗ್ಯದ ತುಮುಲಗಳನ್ನೂ ದಾಟುವುದು ಅವರಿಗೆ ಬೆರಗಿನಂತೆ ಕಂಡಿದೆ.

'ನಾನು ಮೂವತ್ತೈದು ಕೆ.ಜಿ. ಕಡಿಮೆಯಾದೆ. ಕ್ಯಾನ್ಸರ್ ಇದೆ ಎಂದು ಗೊತ್ತಾದಾಗ ಧೃತಿಗೆಡಲಿಲ್ಲ. ಅದನ್ನು ಗುಣಪಡಿಸಿಕೊಳ್ಳುವ ದಾರಿ ಹುಡುಕಿದೆ. ಶಸ್ತ್ರಚಿಕಿತ್ಸೆಯ ನಂತರ ನಾನೀಗ ಆ ಸಮಸ್ಯೆಯಿಂದ ಮುಕ್ತನಾಗಿದ್ದೇನೆ. ನಾವು ಅಂದುಕೊಂಡಂತೆ ಸಿನಿಮಾ ಮೂಡಿಬಂದಿದೆ ಎಂದು ಪ್ರೇಕ್ಷಕರ ಬಾಯಿಯಿಂದ ಮಾತು ಹೊರಟರೆ ನಮ್ಮ ಶ್ರಮಕ್ಕೆ ಫಲ ಸಂದಂತೆ ಆಗುತ್ತದೆ' ಎಂದು ಮಹೇಶ್ ತಮ್ಮ ಖಡಕ್ ಚಹರೆಯಲ್ಲೂ ಭಾವುಕರಾಗಿ ಮಾತನಾಡಿದರು. ■



# ಕೊನೆಯ ಘಟ್ಟದಲ್ಲಿ 'ಆದಿಪುರುಷ್'

ಐದುನೂರು ಕೋಟಿ ರೂಪಾಯಿಗೂ ಹೆಚ್ಚು ಬಜೆಟ್‌ನಲ್ಲಿ ಸಿದ್ಧಗೊಳ್ಳುತ್ತಿದೆ ಎನ್ನಲಾದ 'ಆದಿಪುರುಷ್' ಸಿನಿಮಾ ಹಿಂದಿ ಹಾಗೂ ತೆಲುಗಿನಲ್ಲಿ ತಯಾರಾಗುತ್ತಿದೆ. ಅಂತಿಮ ಹಂತದ ಚಿತ್ರೀಕರಣ ಅ. 26ರಂದು ಶುರುವಾಯಿತು. ದೇಶದ ಇತರ ಹಲವು ಭಾಷೆಗಳಿಗೂ ಡಬ್ ಮಾಡಿ ಈ ಚಿತ್ರವನ್ನು ತೆರೆಕಾಣಿಸಬೇಕೆನ್ನುವುದು ಟಿ–ಸೀರೀಸ್ ಫಿಲ್ಮ್ ನಿರ್ಮಾಣ ಸಂಸ್ಥೆಯ ಉದ್ದೇಶ.

'ಬಾಹುಬಲಿ' ಮೂಲಕ ದೇಶದ ಉದ್ದಗಲಕ್ಕೂ ಗುರುತಾದ ಪ್ರಭಾಸ್ ಈ ಚಿತ್ರದಲ್ಲಿ ರಾಮನ ಪಾತ್ರಧಾರಿ. ಕೃತಿ ಸನೊನ್ ಸೀತಾದೇವಿ. ಸೈಫ್ ಅಲಿ ಖಾನ್ ರಾವಣನಾಗಿ ಅಭಿನಯಿಸಿದ್ದಾರೆ. ಸಚೇತ್–ಪರಂಪರಾ ಸ್ವರ ಸಂಯೋಜನೆಯ ಹಾಡುಗಳಿರುವ ಈ 'ರಾಮಾಯಣ' ಪೌರಾಣಿಕ ಕಥಾನಕವಿರುವ ಸಿನಿಮಾವನ್ನು ಓಂ ರಾವತ್ ನಿರ್ದೇಶಿಸಿದ್ದಾರೆ. 2010ರ ನಡುಘಟ್ಟದಲ್ಲಿ ಈ ಸಿನಿಮಾದ ಆಲೋಚನೆ ಹುಟ್ಟಿತು. ಸೀತೆಯ ಪಾತ್ರಕ್ಕಾಗಿ ಕೆಲವು ನಟಿಯರ ಹೆಸರುಗಳು ಓಡಾಡಿದ ನಂತರ ಕೃತಿ ಸನೊನ್ ಅಭಿನಯಿಸುವುದು ನಿಕ್ಕಿಯಾಗಿತ್ತು. ತೆಲುಗಿನ ಪ್ರೇಕ್ಷಕರು ಹಾಗೂ ಹಿಂದಿ ವೀಕ್ಷಕರನ್ನು ಹಿಡಿದಿಡುವ ತಂತ್ರವಾಗಿ ಪ್ರಭಾಸ್–ಕೃತಿ ಜೋಡಿ ಅನುಕೂಲಕರ ಎಂದೇ ನಿರ್ದೇಶಕರ ಭಾವನೆ.

ರಾಮಾಯಣದಂಥ ಕಥನವನ್ನು ಮತ್ತೆ ಹೇಗೆ ಹೇಳುತ್ತಾರೆ ಎನ್ನುವ ಕುತೂಹಲವಂತೂ ಇದೆ. 'ಬಾಹುಬಲಿ' ಸರಣಿಯ ತೆಲುಗು ಚಿತ್ರಗಳಿಗೆ ಹೋಲಿಸಿದರೆ ಈ ಚಿತ್ರದ ಕೆಲಸ ಚಕಚಕನೆ ನಡೆದಿದೆ. ಚಿತ್ರೀಕರಣಕ್ಕೂ ಅಂದುಕೊಂಡ ದಿನಗಳನ್ನಷ್ಟೆ ವಿನಿಯೋಗಿಸುತ್ತಿರುವುದು ನಿರ್ದೇಶಕರ ವೃತ್ತಿಪರತೆಗೆ ಸಾಕ್ಷಿ ಎಂದು ಪ್ರಭಾಸ್ ಅಭಿಪ್ರಾಯಪಟ್ಟಿದ್ದಾರೆ. ಕೊನೆಯ ಹಂತದ ಚಿತ್ರೀಕರಣ ಮುಗಿದ ನಂತರ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಾರಂಭವಾಗಲಿವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65